# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.128-2011** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಾಗಣ್ಣ<br>ಮುದ್ದಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 03-11-2022. |

**ಪಾಟೀ ಸವಾಲುಃ ಪ್ರತಿವಾದಿ-11 ಮತ್ತು 12 ಪರ ಶ್ರೀ ಎಸ್.ವಿ ವಕೀಲರಿಂದಃ**

ನಾನು ನಮ್ಮ ಊರಿನ ಯಜಮಾನನಾಗಿರುತ್ತೇನೆ. ನನಗೆ ನಮ್ಮ ಊರಿನ ಎಲ್ಲರ ಮನೆಯಲ್ಲಿ ನಡೆಯುವ ವ್ಯವಹಾರಗಳ ಬಗ್ಗೆ ಮಾಹಿತಿ ಇರುತ್ತದೆ. ವಾದಿಯವರು ವಿಭಾಗಕ್ಕಾಗಿ ಈ ದಾವೆ ಸಲ್ಲಿಸಿರುತ್ತಾರೆ. ವಾದಿಯವರು ಯಾವ ಸರ್ವೆ ನಂಬರ್ ಗೆ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಜಮೀನುಗಳು ಇರುವುದು ಗೊತ್ತು. ಅವರಿಗೆ 7 ಐಟಂ ಜಮೀನುಗಳು ಇರುತ್ತವೆ. ಜಮೀನುಗಳು ಮುದ್ದಹಳ್ಳಿ ಮತ್ತು ಕಳಲೆ ಗ್ರಾಮದಲ್ಲಿ ಇರುತ್ತದೆ. ವಾದಿಗಳಿಗೆ 3 ಮನೆಗಳು ಇರುತ್ತವೆ. ಸಾಕ್ಷಿ ಮುಂದುವರೆದು ಅವು ಪಾಳು ಬಿದ್ದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆಗಳನ್ನು ಪಾಲು ಕೇಳಿರುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಮನೆಗಳು ಪಾಳು ಬಿದ್ದಿರುವುದರಿಂದ ಮುಂದೆ ಪಾಲು ಕೇಳುತ್ತಾರೆ ಎಂದು ನುಡಿಯುತ್ತಾರೆ. ಪಾಳು ಮನೆಯಲ್ಲಿ 2 ನೇ ವಾದಿ ವಾದಿ ಮತ್ತು 11 ನೇ ಪ್ರತಿವಾದಿ ರವರು ವಾಸವಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಪಾಳು ಬಿದ್ದಿರುವ ಮನೆಗಳನ್ನು ಹೊರತುಪಡಿಸಿ ಬೇರೆ ಮನೆಗಳನ್ನು ಕಟ್ಟಿಕೊಂಡು ವಾಸವಿರುತ್ತಾರೆ. ಈಗ ಹಾಲಿ ಮರಪ್ಪ, ನಿಂಗಪ್ಪ ಮತ್ತು ಶಿವಪ್ಪ ರವರು ಮಕ್ಕಳು ಸುಮಾರು 30 ವರ್ಷಗಳಿಂದ ಬೇರೆ ಬೇರೆ ವಾಸವಾಗಿರುತ್ತಾರೆ ಎಂದರೆ ಸಾಕ್ಷಿ ಸುಮಾರ 25-30 ವರ್ಷಗಳಿಂದ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಸಹ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಮರಪ್ಪ, ನಿಂಗಪ್ಪ ಮತ್ತು ಶಿವಪ್ಪ ರವರು ಸುಮಾರು 30 ವರ್ಷಗಳ ಹಿಂದೆಯೇ ಭಾಗವಾಗಿ ಬೇರೆ ಬೇರೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಗಳ ತಂದೆ ಆತ್ಮೀಯರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನಮ್ಮ ಊರಿನವರು ಎಂದು ನುಡಿಯುತ್ತಾರೆ. ಹಾಗೆಯೇ ನನಗೆ ನಿಂಗಪ್ಪನವರು ಸಹ ಆತ್ಮೀಯರಲ್ಲ. ನಮ್ಮ ಗ್ರಾಮದಲ್ಲಿ ನಮ್ಮ ಮಧ್ಯಸ್ಥಿಕೆಯಲ್ಲಿ

ಸುಮಾರು 3 ವಿಭಾಗ ಪತ್ರ ಆಗಿರುತ್ತದೆ ನಾನು ಹೇಳುವಂತೆ ವಾದಿಗಳು ಮತ್ತು ಪ್ರತಿವಾದಿಗಳು ನಡುವೆ ವಿಭಾಗವಾಗಿರುವುದಿಲ್ಲ ಎಂದು ಹೇಳುತ್ತಿರುವುದು ಸುಳ್ಳು, ಈಗಾಗಲೇ ವಾದಿ ಮತ್ತು ಪ್ರತಿವಾದಿಗಳ ನಡುವೆ ವಿಭಾಗವಾಗಿದ್ದು ಅವರು ಪ್ರತ್ಯೇಕ ಪ್ರತ್ಯೇಕ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಬಲಕಾರನಕಟ್ಟೆ ಜಮೀನಿನ ಚೆಕ್ಕುಬಂದಿ ಹೇಳಬಲ್ಲೆ ಅದರ ವಿಸ್ತೀರ್ಣ ಸುಮಾರು 3 ಚಿಲ್ಲರೆ ಎಕರೆ ವಿಸ್ತೀರ್ಣ ಇದ್ದು, ಪೂರ್ವಕ್ಕೆ:–ಸರ್ಕಾರಿ ಜಮೀನು ಮತ್ತು ಕಟ್ಟೆ, ಪಶ್ಚಿಮಕ್ಕೆ, ಮತ್ತು ಉತ್ತರಕ್ಕೆ:– ನನಗೆ ಸೇರಿದ ಜಮೀನು, ದಕ್ಷಿಣಕ್ಕೆ:ಹೆಮ್ಮರಈರಪ್ಪನ ಮಗ ಮಹದೇವಪ್ಪ ಉ ಅಯ್ಯು ರವರು ಜಮೀನು ಇರುತ್ತದೆ. ಮರಪ್ಪ, ನಿಂಗಪ್ಪ ಮತ್ತು ಶಿವಪ್ಪನವರಿಗೆ ಸೇರಿದ ಜಮೀನುಗಳನ್ನು ನಾನು ನೋಡಿರುವುದಿಲ್ಲ ಆಗಾಗಗಿ ಅವುಗಳ ಚೆಕ್ಕುಬಂದಿಗಳನ್ನು ನನಗೆ ಹೇಳು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ನನಗೆ ವಾದಿಗಳು ಮತ್ತು ಪ್ರತಿವಾದಿಗಳ ಮನೆಯ ವ್ಯವಹಾರ ಗೊತ್ತಿಲ್ಲದೇ ಇದ್ದರೂ ಶಿವಪ್ಪನವರ ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(14 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**